**ಚಂಚಲಾ ವೇಣು**

ಕಲೆ: ಗಣೇಶ ಆಚಾರ್ಯ

# ಮೂರು ಅವಕಾಶಗಳು

ಬಸಪ್ಪ ಓರ್ವ ಬಡ ರೈತನಾಗಿದ್ದ. ಅವನ ಮನೆಯಲ್ಲಿ ತಮ್ಮಂದಿರು ಹೆಂಡತಿ ಮಕ್ಕಳು ಎಂದು ತುಂಬಾ ಜನವಿದ್ದರು. ಆದರೆ, ದುಡಿಯುವವ ಬಸಪ್ಪ ಒಬ್ಬನೇ. ದುಡಿದದ್ದು ಯಾತಕ್ಕೂ ಸಾಲುತ್ತಿರಲಿಲ್ಲ. ಬಸಪ್ಪ ಬಡತನದಿಂದ ಬೇಸತ್ತು ಹೋಗಿದ್ದ.

ಒಮ್ಮೆ ಅವನ ಊರಿಗೆ ತುಂಬಾ ಮಹಿಮೆಯುಳ್ಳ ಸನ್ಯಾಸಿಯೊಬ್ಬರು ಬಂದರು. ಬಸಪ್ಪ ತನ್ನ ಅದೃಷ್ಟ ಪರೀಕ್ಷೆಗೆಂದು ಅವರ ಬಳಿ ಹೋದ. ಆ ಸನ್ಯಾಸಿಗೆ ಬಸಪ್ಪನ ಬಡತನ ತಿಳಿದಿತ್ತು. ಅವರು ಅವನಿಗೆ ಪರಿಹಾರ ನೀಡಿದರು, 'ಬೆಳಗ್ಗೆ ಎದ್ದು ಮನೆಯಿಂದ ಹೊರಬಂದಾಗ ನಿನ್ನೆದುರು ಮೊದಲು ಏನು ಕಾಣುತ್ತದೋ ಅದನ್ನು ಗಟ್ಟಿಯಾಗಿ ಹಿಡಿದುಕೋ... ಅಲ್ಲಿಗೆ ನಿನ್ನ ಬಡತನ ನಿವಾರಣೆಯಾಗುತ್ತದೆ. ನಿನಗೆ ಮೂರು ದಿನ ಮಾತ್ರ ಈ ರೀತಿ ಅವಕಾಶ ಸಿಗುತ್ತದೆ...' ಎಂದಾಗ ಬಸಪ್ಪ ಅಚ್ಚರಿಪಟ್ಟ. ಮಹಾತ್ಮರು ಹೇಳಿದಂತೆ ಮಾಡೋಣ ಎಂದುಕೊಂಡು ಮನೆಗೆ ಬಂದ.

ಅದರಂತೆ ಅವನು ಮರುದಿನ ಬೆಳಿಗ್ಗೆ ಮನೆಯಿಂದ ಹೊರಬಂದಾಗ ಒಬ್ಬ ಹಣ್ಣು ಹಣ್ಣಾದ ಕೊಳಕು ಭಿಕ್ಷುಕ ಕಾಣಿಸಿದ. ಅವನನ್ನು ಕಂಡೊಡನೆ ಅಸಹ್ಯಪಟ್ಟುಕೊಂಡು ಕೋಪದಿಂದ, 'ಅಯ್ಯೋ... ಹೋಗಪ್ಪಾ... ನಮಗೇ ತಿನ್ನಲು ಸಾಕಾಗುತ್ತಿಲ್ಲ. ನಿನಗೆಲ್ಲಿಂದ ಕೊಡಲಿ... ನಡಿ ನಡಿ' ಎಂದು ಓಡಿಸಿಬಿಟ್ಟ. ಆ ಭಿಕ್ಷುಕ ಕೂಡಲೇ ಹೊರಟುಹೋದ.

ಮರುದಿನ ಅವನು ಮನೆಯಿಂದ ಹೊರಬಂದಾಗ ಮನೆಯೆದುರಿಗೆ ಮರದ ದೊಡ್ಡ ತುಂಡಿಗೆ ಬೆಂಕಿ ಹೊತ್ತಿಕೊಂಡು ಧಗಧಗ ಉರಿಯುತ್ತಿತ್ತು. ಕೆಂಪಗೆ ಕಾದ ಅದರ ಕೆಂಡ ನಿಗಿನಿಗಿ ಹೊಳೆಯುತ್ತಿತ್ತು. ಬೆಂಕಿಯ ಶಾಖಕ್ಕೆ ಅದರ ಹತ್ತಿರ ಹೋಗಲು ಬಸಪ್ಪನಿಗೆ ಆಗಲಿಲ್ಲ. ಆಗ ಸನ್ಯಾಸಿ ಹೇಳಿದ ಮಾತು ನೆನಪಿಗೆ ಬಂತು. ಆದರೆ, ಇಂತಹ ಕೆಂಡವನ್ನು ಹೇಗೆ ಹಿಡಿದುಕೊಳ್ಳುವುದು? ಎಂದು ಹಿಂಜರಿಯುತ್ತ ನಿಂತುಬಿಟ್ಟ. ಸ್ವಲ್ಪ ಹೊತ್ತಿನಲ್ಲಿ ಆ ಬೆಂಕಿ ನಂದಿಹೋಯಿತು. ಆ ಜಾಗದಲ್ಲಿ ಬೆಂಕಿಯ ಕುರುಹೇ ಇರಲಿಲ್ಲ. 'ಛೇ... ಹಿಡಿದುಕೊಂಡಿದ್ದರೆ ಚೆನ್ನಾಗಿರುತ್ತಿತ್ತು' ಎಂದು ಅವನು ಪೇಚಾಡಿದ.

ಮರುದಿನ ಅವನು, 'ಇಂದು ಕೊನೆಯ ದಿನ. ಮೊದಲ ಎರಡು ದಿನಗಳಲ್ಲಿ ಬೆಳಗ್ಗೆ ಕಂಡಿದ್ದನ್ನು ಹಿಡಿದುಕೊಳ್ಳುವಂತೆಯೇ ಇರಲಿಲ್ಲ. ಈ ದಿನ ಏನೇ ಆದರೂ ಮೊದಲು ಕಣ್ಣಿಗೆ ಬೀಳುವುದನ್ನು ಹಿಡಿದುಕೊಂಡು ಬಿಡುತ್ತೇನೆ.' ಎಂದು ಮನದಲ್ಲೇ ಅಂದುಕೊಂಡು ಮನೆಯಿಂದ ಹೊರಬಂದ.

ಅಲ್ಲಿ ಮನೆಮುಂದೆ ಮಿರಮಿರ ಮಿಂಚುತ್ತಿದ್ದ ದೊಡ್ಡ ಕಪ್ಪುಬಣ್ಣದ ನಾಗರಹಾವು ಸುರುಳಿಸುತ್ತಿಕೊಂಡು ಹೆಡೆಯೆತ್ತಿ ಇವನತ್ತಲೇ ದಿಟ್ಟಿಸುತ್ತಿತ್ತು. ಅದನ್ನು ನೋಡುತ್ತಲೇ ಬಸಪ್ಪ ಭಯದಿಂದ ಹೌಹಾರಿಬಿಟ್ಟ. ಹೆದರಿಕೆಗೆ ಮೈಯಿಡೀ ಬೆವರಿನಿಂದ ತೋಯ್ದುಹೋಯ್ತು. ಒಂದು ಹೆಜ್ಜೆಯನ್ನೂ ಮುಂದಿಡಲು ಅವನಿಂದಾಗಲಿಲ್ಲ. ಜೀವಭಯ ಕಾಡಿತು. ಐದು ನಿಮಿಷ ಹಾವು ಹಾಗೇ ಇತ್ತು. ನಂತರ ಪಕ್ಕಕ್ಕೆ ಸರಿಯಲು ಶುರುಮಾಡಿತು. ಬಸಪ್ಪ ಅದನ್ನು ದಿಟ್ಟಿಸುತ್ತಲೇ ಇದ್ದ. ಹಾವು ಸರಸರನೆ ಹರಿಯುತ್ತಾ ಮುಂದೆ ಮುಂದೆ ಹೋಗುತ್ತಿತ್ತು. ಸನ್ಯಾಸಿಯ ಮಾತು ನೆನಪಿಸಿಕೊಂಡು ಕೊನೆಯ ಅವಕಾಶ ಕೈ ತಪ್ಪಬಾರದು ಎಂದುಕೊಂಡವನೇ ಹಾವಿನ ಹಿಂದೆ ವೇಗವಾಗಿ ಹೆಜ್ಜೆ ಹಾಕಿದ.